

ತೆಲಿಯಾಗ ಸುರಿದಾಗ ಪದ್ದಕ್ಕ ಆ ಕ್ಷಣ ಖುಷಿಯಾಗಿ ಮತ್ತೆ ದೇವಿಯ ಮುಂದೆ ದೀರ್ಘದಂಡ ನಮಸ್ಕಾರ ಹಾಕಿದ್ಲು. ಅಕಿ ಜೋಡಿ ನಾನೂ ನಮಸ್ಕರಿಸಿದೆ. 'ನಾಳೆ ಲಗೂನ ಬರೂನೂ ಬಾ, ಈಗ ಎಮ್ಮಿಗೊಳ ಊರಗೀರ ಮುಟ್ಟಿರಬೇಕ' ಎಂದು ಅಲ್ಲಿಂದ ಇಬ್ಬರೂ ಜಿಗಿತ ಕೊಟ್ಟೆವು.

ಎಮ್ಮಿ ಊರ ಸಮೀಪಕ್ಕೆ ಬಂದು ಮುಟ್ಟಿದ್ದವು. ನಾವು ದಸಾ ದಸಾ ತೇಕುತ್ತಾ ಬಂದು ಅವುಗಳನ್ನು ಕೂಡಿಕೊಂಡೆವು. 'ಹನಮ್ಯಾ ದೇವಿ ವಿಷ್ಯಾ ಊರಾಗ ಯಾರಮುಂದು ಹೇಳಬ್ಯಾಡ' ಎಂದು ಪದ್ದಕ್ಕ ತಾಕೀತು ಮಾಡಿದ್ಲು ಹಿಂಗಾಗಿ ಆ ವಿಷ್ಯಾ ನಾನೂ ಗುಟ್ಟಾಗಿ ಇಟ್ಟುಕೊಂಡಿದ್ದೆ.

* * *

ಅಟ್ಟಬಟ್ಟ ಅರಣ್ಯದಾಗ, ಕಲ್ಲುಮುಳ್ಳಿನ ಕಂಟ್ಯಾಗ ದೇವಿ ಅಲ್ಲಿಗೆ ಹೆಂಗ ಬಂದ ನೆಲಸ್ಯಾಳು? ಅದರಾಗ ಆ ದೇವಿ ಎದಿ ಮ್ಯಾಲ ಮೂರು ಮೊಲೆ...! ಇದೇನು ಅಕಿ ಲೀಲೆಯೋ? ಇದೇನು ಪವಾಡವೋ? ದೇವರೇ ಬಲ್ಲ...! ಅದು ನನ್ನಂತ ದಿಕ್ಕುದೆಸೆ ಇಲ್ಲದ, ದೇವಪುರ ಕೇರಿಯ ದುಂಡಜ್ಜಿ ಮೊಮ್ಮಗಳಿಗೆ ಕಾಣುವುದಂದ್ರೇ ಏನು? ಈ ವಿಷಯ ಊರಿನವರಿಗೆ ಗೊತ್ತಾದ್ರೇ